ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಲಯ ಆಯುಕ್ತರು, ಯಲಹಂಕ ವಲಯ ರವರ ಕಛೇರಿ ಅಮೃತಹಳ್ಳಿ ಮುಖ್ಯರಸ್ತೆ, ಬ್ಯಾಟರಾಯನಪುರ,
ಬೆಂಗಳೂರು–560092.

ಸಂಖ್ಯೆ: ವಆ(ಯ.ವ)ಪಿಆರ್/221/25–26 ದಿನಾಂಕ: 19/3/25

ಮಾನ್ಯ ಆಡಳಿತಾಧಿಕಾರಿಗಳು, ಬಿಬಿಎಂಪಿ ರವರ ಮುಂದೆ ಮಂಡಿಸಲಾದ ಟಿಪ್ಪಣಿ

ವಿಷಯ: Improvements of roads and drains C.P layout and Davinagar and surroundings area in ward no.11, Kodigehalli, Kodigehalli sub division ಅಂದಾಜು ಮೊತ್ತ ರೂ. 125.00 ಲಕ್ಷಗಳ ಕಾಮಗಾರಿಗೆ ಆಡಳಿತಾತ್ಮಕ ಮತ್ತು ಟೆಂಡರ್ ಅನುಮೋದನೆ ನೀಡುವ ಬಗ್ಗೆ.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2024–25ನೇ ಸಾಲಿನ ಆಯವ್ಯಯ ಸಂಕೇತ: 05–330502 **(ಹಿಂದುಳಿದ ವರ್ಗದವರ ಕಲ್ಯಾಣ ನಿಧಿ ಕಾಮಗಾರಿಗಳು ಮೂಲಭೂತ ಸೌಕರ್ಯ ಅಭಿವೃದ್ಧಿ ಅನುದಾನ) ಪಿ–2337 & ಪಿ–3863 ಅನುದಾನದಡಿ** Improvements of roads and drains C.P layout and Davinagar and surroundings area in ward no.11, Kodigehalli, Kodigehalli sub division ಕಾಮಗಾರಿಯನ್ನು ಅಂದಾಜು ಮೊತ್ತ ರೂ. 125.00 ಲಕ್ಷಗಳಲ್ಲಿ ಕೈಗೊಳ್ಳಲು ಅನುದಾನ ಮಂಜೂರಾಗಿರುತ್ತದೆ.

ಮುಂದುವರೆದು, 2023–24ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿಗಳನ್ವಯ ಹಾಗೂ ಅನುಮೋದಿತ ದರಪಟ್ಟಿಯಂತೆ ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಹಾಗೂ ಮಾನ್ಯ ಮುಖ್ಯ ಆಯುಕ್ತರು ಪಾಲಿಕೆಯ ಅನುದಾನದಡಿಯಲ್ಲಿ ಕೈಗೊಳ್ಳುವ ಎಲ್ಲಾ ಕಾಮಗಾರಿಗಳಿಗೆ ಅಂದಾಜು ಪಟ್ಟಿಯಲ್ಲಿಯೇ ಟೆಂಡರ್ ಪ್ರೀಮಿಯಂನ್ನು ಅಳವಡಿಸಿಕೊಳ್ಳಲು ಸೂಚಿಸಿರುವ ಹಿನ್ನೆಲೆಯಲ್ಲಿ **ಅಂದಾಜು ಪಟ್ಟಿಯಲ್ಲಿ ಶೇ. 5% ರಷ್ಟು ಟೆಂಡರ್ ಪ್ರೀಮಿಯಂನ್ನು ಅಳವಡಿಸಿಕೊಳ್ಳಲಾಗಿತ್ತದೆ.**

ಸದರಿ ಕಾಮಗಾರಿಯನ್ನು ಸಾರ್ವಜನಿಕ ಸೇವಾ ಹಿತದೃಷ್ಟಿಯಿಂದ ತುರ್ತಾಗಿ ಅನುಷ್ಠಾನಗೊಳಿಸಬೇಕಾಗಿರುವುದರಿಂದ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಮಂಜೂರಾತಿಯನ್ನು ನಿರೀಕ್ಷಿಸಿ **ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ** ರವರು ದಿನಾಂಕ: 10–02–2025 ರಂದು ಟೆಂಡರ್ ಆಹ್ವಾನಿಸಲಾಗಿತ್ತು.

ತಾಂತ್ರಿಕ ಬಿಡ್‌ನ್ನು ದಿನಾಂಕ: 29–03–2025 ರಂದು ತೆರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿ ಮೂರು ಜನ ಬಿಡ್‌ದಾರರು ಭಾಗವಹಿಸಿದ್ದು, ಇಬ್ಬರು ಬಿಡ್‌ದಾರರು ತಾಂತ್ರಿಕವಾಗಿ ಅರ್ಹರಾಗಿರುತ್ತಾರೆ. ಸದರಿಯವರ ಆರ್ಥಿಕ ಬಿಡ್ ತೆರೆಯಲು ಮುಖ್ಯ ಅಭಿಯಂತರರು ಯಲಹಂಕ ವಲಯರವರು ಅನುಮೋದಿಸಿರುವಂತೆ ದಿನಾಂಕ: 05–06–2025 ರಂದು ಆರ್ಥಿಕ ಬಿಡ್‌ನ್ನು ತೆರೆಯಲಾಗಿದ್ದು, ವಿವರ ಕೆಳಕಂಡಂತೆ ಇರುತ್ತದೆ.

ಕ್ರ. ಸಂ	ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್ ಗಿಟ್ಟಿ ಮೊತ್ತ (ರೂ. ಗಳಲ್ಲಿ) (ಜಿ.ಎಸ್.ಟಿ ಹೊರತುಪಡಿಸಿ)	ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ (ರೂಗಳಲ್ಲಿ) (ಜಿ.ಎಸ್.ಟಿ ಹೊರತುಪಡಿಸಿ)	ಟೆಂಡರ್ ಗಿಟ್ಟಿ ಮೊತ್ತ ದರಗಳಿಗೆ ಹೋಲಿಸಿದಾಗ
1	ಶ್ರೀಮತಿ. ಮಮತ (ರೋಹನ್ ಕನ್ಸ್‌ಟ್ರಕ್ಷನ್ಸ್)	125.00	10077413.41	10580284.83	ಶೇ.(+)4.99% ರಷ್ಟು ಹೆಚ್ಚು
2	ಶ್ರೀ. ಎನ್ ಕುಮಾರ್ ರೆಡ್ಡಿ			10916714.60	ಶೇ.(+)8.33% ರಷ್ಟು ಹೆಚ್ಚು

ಬಿಡ್‌ದಾರರಾದ ಶ್ರೀಮತಿ. ಮಮತ (ರೋಹನ್ ಕನ್ಸ್‌ಟ್ರಕ್ಷನ್ಸ್) ರವರು ಎಲ್–1 ಬಿಡ್‌ದಾರರಾಗಿರುತ್ತಾರೆ.

ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿದೆ.

1. ಪ್ರಸ್ತಾಪಿತ ಕಾಮಗಾರಿಗಳ ಸ್ಥಳ ಪರಿವೀಕ್ಷಣೆ ಮಾಡಿ ಕಾಮಗಾರಿಯ ಅವಶ್ಯಕತೆ ಬಗ್ಗೆ ಹಾಗೂ ಸದರಿ ಕಾಮಗಾರಿಯನ್ನು ಪಾಲಿಕೆಯ ಹಿಂದಿನ ಆಯವ್ಯಯಗಳಲ್ಲಿ/ ಅನುದಾನಗಳಲ್ಲಿ ಕೈಗೊಂಡಿಲ್ಲದೆ ಇರುವ ಮತ್ತು ಪುನಾರಾವರ್ತನೆಯಾಗದೇ ಇರುವುದನ್ನು ಖಚಿತ ಪಡಿಸಿಕೊಳ್ಳುವುದು.
2. ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಪೂರ್ವದಲ್ಲಿ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ:ಮುಲೆಅ/ಆಯವ್ಯ/2019–20/ಪಿಆರ್/11/2018–19 ದಿನಾಂಕ:12–06–2019 ಮತ್ತು ಆಯುಕ್ತರವರ ಆಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ:ಬಿಬಿಎಂಪಿ/ಆ/ಪಿ.ಆರ್/5287/2019–20, ದಿನಾಂಕ:05–11–2019 ಮತ್ತು ಬಿಬಿಎಂಪಿ/ಪಿ/ಪಿಆರ್/6166/2019–20, ದಿನಾಂಕ:13–12–2019 ರಲ್ಲಿನ ನಿರ್ದೇಶನಗಳನ್ನು/ ಪ್ರಕ್ರಿಯೆಗಳನ್ನು ಅನುಸರಿಸತಕ್ಕದ್ದು.
3. ಕಾಮಗಾರಿ ನಿರ್ವಹಿಸುವ ಮುನ್ನ ಹಾಗೂ ನಂತರದ ಜಿಪಿಎಸ್‌ಯುಳ್ಳ ಛಾಯಾ ಚಿತ್ರಗಳನ್ನು ಸಲ್ಲಿಸತಕ್ಕದ್ದು.

ಈ ಮೇಲ್ಕಂಡ ಅಂಶಗಳ ಹಿನ್ನೆಲೆ ಅನುಮೋದನೆ ನೀಡಲು ಮಂಡಿಸಲಾದ ಟಿಪ್ಪಣಿ.

1. ಕಾಮಗಾರಿಯ ಮೊತ್ತ ರೂ. 125.00 ಲಕ್ಷಗಳ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ ಟೆಂಡರ್ ಆಹ್ವಾನಿಸಲಾಗಿರುವುದರಿಂದ ಘಟನ್ನೋತ್ತರ ಆಡಳಿತಾತ್ಮಕ ಅನುಮೋದನೆ.
2. ಸದರಿ ಕಾಮಗಾರಿಯನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಗುತ್ತಿಗೆದಾರರಾದ **ಶ್ರೀಮತಿ. ಮಮತ (ರೋಹನ್ ಕನ್‌ಸ್ಟ್ರಕ್ಷನ್ಸ್) ರವರು ನಮೂದಿಸಿರುವ ಟೆಂಡರ್‌ಗಿಟ್ಟ ಮೊತ್ತಕ್ಕೆ ಶೇ. 4.99% ಹೆಚ್ಚು ಮೊತ್ತ ರೂ. 1,05,80,284.83 ಗಳಿಗೆ (ಜಿ.ಎಸ್.ಟಿ. ಹೊರತುಪಡಿಸಿ) ಟೆಂಡರ್ ಅನುಮೋದನೆ** ನೀಡಲು ಮಾನ್ಯ ಆಡಳಿತಗಾರರು ರವರ ಅನುಮೋದನೆಗಾಗಿ ಟಿಪ್ಪಣಿಯನ್ನು ಮಂಡಿಸಿದೆ.

ಮಾನ್ಯ ಆಯುಕ್ತರವರ ಅನುಮೋದನೆಯಂತೆ)

ವಲಯ ಆಯುಕ್ತರು
ವಲಯ ಆಯುಕ್ತರು ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಶ್ಯಾಟರಾಯನಪುರ, ಬೆಂಗಳೂರು-92.
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ